**ದಿನಾಂಕಃ 10.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ಪರ: ಶ್ರೀ. ಡಿ.ಎನ್.ಪಿ. ವಕೀಲರಿಂದಃ–</u>**

ವಾದಿಗೆ ನಿಪಿ.8 ರ ಕ್ರಯ ಪತ್ರದಂತೆ ಪೂರ್ವ–ಪಶ್ಚಿಮ – 54 ಅಡಿ, ಉತ್ತರ–ದಕ್ಷಿಣ – 45 ಅಡಿ ಖಾಲಿ ನಿವೇಶನ ಇರುತ್ತದೆ ಎಂದರೆ ಸರಿ. ನಮ್ಮ ಕಛೇರಿಯ ರಿಜಿಸ್ಟರಿನಲ್ಲಿಯೂ ಸಹ ಪೂರ್ವ–ಪಶ್ಚಿಮ ಎಷ್ಟು ಅಡಿ ಎಂದು ಹಾಗೂ ನಂತರ ಉತ್ತರ– ದಕ್ಷಿಣ ಎಷ್ಟು ಅಡಿ ಎಂದು ನಮೂದಿಸಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ರಿಜಿಸ್ಟರಿನಲ್ಲಿ ಅಳತೆಯನ್ನು ತಿದ್ದುಪಡಿ ಮಾಡಿದರೆ ಅದನ್ನು ಏಕೆ ತಿದ್ದುಪಡಿ ಮಾಡಲಾಗಿರುತ್ತದೆ ಎಂದು ಷರಾವನ್ನು ಬರೆಯಲಾಗಿರುತ್ತದೆ ಎಂದರೆ ಸರಿ.

ನಿಪಿ.1 ರ ಅಸೆಸ್ಮೆಂಟ್ ಎಕ್ಸಟ್ರಾಕ್ಟ್ ಅನ್ನು ನಮ್ಮ ಇಲಾಖೆಯ ರಿಜಿಸ್ಟರನ್ನು ನೋಡಿ ಅದರ ಪ್ರಕಾರ ಬರೆದುಕೊಟ್ಟಿರುವುದಿಲ್ಲ ಎಂದರೆ, ಸಾಕ್ಷಿಯು ಆ ಸಮಯದಲ್ಲಿ ಏನು ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.8 ರ ಕ್ರಯ ಪತ್ರದಂತೆ ನಾವು ಇ–ಸ್ವತ್ತನ್ನು ಮಾಡಿಕೊಡಬೇಕು ಎಂದರೆ ಸರಿ. ನಾವು ಇ–ಸ್ವತ್ತನ್ನು ಮಾಡಿಕೊಡುವಾಗ ಮೂಲ ಕ್ರಯಪತ್ರವನ್ನು ನೋಡಿ ಇ–ಸ್ವತ್ತನ್ನು ಮಾಡಿಕೊಡಬೇಕು ಎಂದರೆ ಸರಿ. ನಿಪಿ.8 ರ ಕ್ರಯಪತ್ರದಂತೆ ವಾದಿಗೆ ನಾವು ಇದುವರೆಗು ಇ–ಸ್ವತ್ತನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ನಮ್ಮ ಪಂಚಾಯಿತಿ ಕಡೆಯಿಂದ ಸ್ಥಳಕ್ಕೆ ಹೋಗಿ ಅಳತೆ ಮಾಡಿ ಪರಿಶೀಲನೆ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಿಪಿ.8 ರ ಕ್ರಯ ಪತ್ರದಂತೆ ನಿಪಿ.10 ಮತ್ತು 12 ರ ನಕಾಶೆಗಳನ್ನು ತಯಾರಿಸಿರುವುದಿಲ್ಲ ಎಂದರೆ ಸರಿ.

ನಿಪಿ.13 ರಂತೆ ಪ್ರತಿವಾದಿಯು ಪಂಚಾಯಿತಿಗೆ ದಾವಾ ಸ್ವತ್ತನ್ನು ಅಳತೆ ಮಾಡಿದ ಕುರಿತ ತಕರಾರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ವಾದಿಯು ದಾವಾ ಆಸ್ತಿಯಲ್ಲಿ ಯಾವುದೇ ಪರವಾನಿಗೆಯನ್ನು ಪಡೆಯದೆ ಕಟ್ಟಡ ನಿರ್ಮಿಸಲು ಅಡಿಪಾಯವನ್ನು ತೆಗೆದಿದ್ದು ಅದಕ್ಕೆ ಸಂಬಂಧಿಸಿದಂತೆ ಪಂಚಾಯಿತಿಯಿಂದ ನಿಪಿ.15 ರಂತೆ ತಿಳುವಳಿಕೆ ನೋಟೀಸನ್ನು ನೀಡಲಾಗಿತ್ತು ಎಂದರೆ ಸರಿ. ವಾದಿಗೆ ನಿಪಿ.8 ರ ಕ್ರಯಪತ್ರದಂತೆ ಪೂರ್ವ–ಪಶ್ಚಿಮ – 54 ಅಡಿ, ಉತ್ತರ –ದಕ್ಷಿಣ – 45 ಅಡಿ ಮಾತ್ರ ಇರುತ್ತದೆ ಎಂದರೆ, ಸಾಕ್ಷಿಯು ಕ್ರಯ ಪತ್ರದಂತೆ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ.1 ರ ಅಸೆಸ್ಮೆಂಟ್ ನಂತೆ ಪೂರ್ವ–ಪಶ್ಚಿಮ – 45

ಅಡಿ, ಉತ್ತರ –ದಕ್ಷಿಣ – 54 ಅಡಿ ಇರುತ್ತದೆ ಎಂದು ನೀಡಿರುವಂತೆ ದಾವಾ ಆಸ್ತಿಯ ನಿವೇಶನ ಇರುವುದಿಲ್ಲ ಎಂದರೆ, ಸಾಕ್ಷಿಯು ಅದನ್ನು ಹಿಂದೆ ಇದ್ದವರು ಯಾವ ರೀತಿ ತಿದ್ದುಪಡಿ ಮಾಡಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.1ರಲ್ಲಿ ನಿವೇಶನದ ಅಳತೆಯನ್ನು ಯಾವ ಆದೇಶದ ಮೇರೇಗೆ ತಿದ್ದುಪಡಿ ಮಾಡಲಾಗಿರುತ್ತದೆ ಎಂದು ನಮ್ಮ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ.1ರ ದಾಖಲೆಯಲ್ಲಿ ನಿವೇಶನದ ಅಳತೆಯನ್ನು ತಿದ್ದುಪಡಿ ಮಾಡಿದ ಬಗ್ಗೆ ನಿಪಿ.1ರಲ್ಲಿ ಯಾವುದೇ ಷಾರವಾಗಲಿ ಅಥವಾ ಆದೇಶದ ದಿನಾಂಕವಾಗಲಿ ಇರುವುದಿಲ್ಲ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ನಮ್ಮ ಬಳಿ ಯಾವುದೇ ದಾಖಲೆ ಇರುವುದಿಲ್ಲ. ಪ್ರತಿವಾದಿಯು ನಿಪಿ.8ರ ಕ್ರಯಪತ್ರದಲ್ಲಿ ನಮೂದಿಸಿರುವ ವಾದಿಯ ನಿವೇಶನವನ್ನು ಒತ್ತುವರಿ ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾದಂ.,ರವರು ಕಡೂರು.